ನಿವೇಶನಗಳ ವಿವರ ಅನುಬಂಧ–I ರಲ್ಲಿ ನಮೂದಿಸಿ ಲಗತ್ತಿಸಲಾಗಿದೆ. ಹಂಚಿಕೆದಾರರ ಅಳತೆವಾರು ಪಟ್ಟಿಯನ್ನು ಲಗತ್ತಿಸಿದೆ.

ಆ) 9867 ಹಂಚಿಕೆದಾರರ ಪೈಕಿ 196 ಘಟಕಗಳು ಪ.ಜಾತಿ ಹಾಗೂ ಪ. ಪಂಗಡದವರಿಗೆ ಹಂಚಿಕೆ ಮಾಡಲಾಗಿದೆ. ವಿವರ ಅನುಬಂಧ–II ರಲ್ಲಿ ನಮೂದಿಸಿ ಲಗತ್ತಿಸಲಾಗಿದೆ.

ಇ) ನಿವೇಶನಗಳ ಅಳತೆಯನ್ನು ಪೂರ್ವಭಾವಿಯಾಗಿ ನಿಗದಿಪಡಿಸುವ ಪದ್ಧತಿಯಿರುವುದಿಲ್ಲ. ಉದ್ದಿಮೆಯ ಅಗತ್ಯತೆಗೆ ಅನುಗುಣವಾಗಿ, ವಿಸ್ತೀರ್ಣವನ್ನು ನಿರ್ಧರಿಸಿ ನೀಡಲಾಗುವುದು. ಪ್ರಸ್ತುತ ನಾಲ್ಕು ಪ್ರದೇಶಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ವಿವರಗಳನ್ನು ಅನುಬಂಧ 4ರಲ್ಲಿ ನೀಡಲಾಗಿರುತ್ತದೆ.

ಈ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಲೆಕ್ಕ ಪತ್ರಗಳನ್ನು ಮಹಾಲೇಖಪಾಲರು ಬೆಂಗಳೂರು ಇವರು ಪ್ರತಿ ವರ್ಷ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯನ್ನು ಮಾಡುತ್ತಾರೆ.

ಉ) 2003–04ರ ಸಾಲಿನಲ್ಲಿ ಲೆಕ್ಕಪತ್ರಗಳ ಪರಿಶೋಧನೆ ಮಾಡಿ ಮಹಾಲೇಖಪಾಲರು ಬೆಂಗಳೂರು ಇವರು ನೀಡಿರುವ ವರದಿಯನ್ನು ಅನುಬಂಧ–3ರಲ್ಲಿ ಲಗತ್ತಿಸಿ ಇಡಲಾಗಿದೆ. ಸದರಿ ವರದಿಯು ಮಹಾಲೇಖಪಾಲರು ಮಾಡಿದ ಆಡಿಟ್ ಆಕ್ಷೇಪಗಳನ್ನೊಳಗೊಂಡಿರುತ್ತದೆ.

2702 (2758) ಶ್ರೀ ರಾಜೇಂದ್ರನ್ ಎಸ್. (ಕೆಜಿಎಫ್) :– ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ಅಮಾನತ್ತುಗೊಳಿಸಲಾಗಿರುವ ಅಧಿಕಾರಿ/ನೌಕರರು ಯಾರು ಯಾರು;

ಆ) ಅಮಾನತ್ತುಗೊಳಿಸಲು ಕಾರಣಗಳೇನು;

ಇ) ಇನ್ನೂ ಎಷ್ಟು ನೌಕರರು/ಅಧಿಕಾರಿಗಳನ್ನು ಅಮಾನತ್ತುಗೊಳಿಸಲಾಗುವುದು (ವಿವರಗಳನ್ನು ಒದಗಿಸುವುದು)?

ಶ್ರೀ ಸಿ. ಚನ್ನಿಗಪ್ಪ (ರೇಷ್ಮೆ ಸಚಿವರು) :

ಅ,ಆ) ಅಮಾನತ್ತುಗೊಂಡ ಅಧಿಕಾರಿ/ನೌಕರರು ಹಾಗೂ ಕಾರಣಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕರ್ತವ್ಯ ನಿರ್ವಹಣೆಯಲ್ಲಿ ಲೋಪ, ಗಂಭೀರ ಆರೋಪಗಳು ಕಂಡು ಬಂದಲ್ಲಿ ನಿಯಮಗಳಿಗನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.

ಅನುಬಂಧ

ಅಮಾನತ್ತಿಗೊಳಗಾದ ಅಧಿಕಾರಿ/ನೌಕರರ ವಿವರ :

ಕ್ರಮ.ಸಂಖ್ಯೆ	ಅಧಿಕಾರಿ/ನೌಕರರು ಶ್ರೀಯುತ	ಕಾರಣಗಳು
1	ಸೂಣ್ಣಗೌಡ ರೇಷ್ಮೆ ಪ್ರವರ್ತಕ (ಸಂಖ್ಯಾತಿರಿಕ್ತ) ರೇಷ್ಮೆ ಗೂಡು ಮಾರುಕಟ್ಟೆ ಶಿಡ್ಲಘಟ್ಟ	ಕರ್ತವ್ಯ ನಿರ್ವಹಣೆಯಲ್ಲಿ ಖೋಟಾ ನೋಟು ಚಲಾವಣೆ ಆರೋಪದ ಮೇರೆಗೆ (ಪ್ರಸ್ತುತ ನ್ಯಾಯಾಲಯದಲ್ಲಿ ಪ್ರಕರಣವಿದೆ)
2	ಬಿ.ಜಿ.ಮಧುಸೂದನ ರೇಷ್ಮೆ ನಿರೀಕ್ಷಕ	ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡಿದ್ದರಿಂದ
3	ಆರ್.ವೇಣುಗೋಪಾಲ್ ರೇಷ್ಮೆ ಉಪನಿರ್ದೇಶಕರು ರೇಷ್ಮೆ ಗೂಡು ಮಾರುಕಟ್ಟೆ ಶಿಡ್ಲಘಟ್ಟ	ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವ ಬಗ್ಗೆ
4	ಆದಿನಾರಾಯಣಪ್ಪ ರೇಷ್ಮೆ ನಿರೀಕ್ಷಕ. ರೇಷ್ಮೆ ಗೂಡು ಮಾರುಕಟ್ಟೆ ಶಿಡ್ಲಘಟ್ಟ	ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವ ಬಗ್ಗೆ
5	ಲಕ್ಷ್ಮಯ್ಯ ರೇಷ್ಮೆ ಪ್ರವರ್ತಕ ರೇಷ್ಮೆ ಗೂಡು ಮಾರುಕಟ್ಟೆ ಶಿಡ್ಲಘಟ್ಟ	ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವ ಬಗ್ಗೆ
6	ಎನ್. ರಾಜಣ್ಣ ಸಂಖ್ಯಾತಿರಿಕ್ತ ಗ್ರೂಪ್ 'ಡಿ' ರೇಷ್ಮೆ ಗೂಡು ಮಾರುಕಟ್ಟೆ ಶಿಡ್ಲಘಟ್ಟ	ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವ ಬಗ್ಗೆ
7	ಜೆ. ಮೋಹನಮೂರ್ತಿ ರೇಷ್ಮೆ ಪ್ರದರ್ಶಕ ತಾಂತ್ರಿಕ ಸೇವಾ ಕೇಂದ್ರ ಯಲಹಂಕ	ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವ ಬಗ್ಗೆ
8	ಎಲ್. ನಾಗಶೆಟ್ಟಿ ರೇಷ್ಮೆ ಸಹಾಯಕ ನಿರ್ದೇಶಕರು ರೇಷ್ಮೆ ಗೂಡಿನ ಮಾರುಕಟ್ಟೆ ರಾಮನಗರಂ	ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವ ಬಗ್ಗೆ
9	ಜಯರಾಜ್ ರೇಷ್ಮೆ ಪ್ರದರ್ಶಕ ರೇಷ್ಮೆ ಗೂಡಿನ ಮಾರುಕಟ್ಟೆ ರಾಮನಗರಂ	ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವ ಬಗ್ಗೆ
10	ರಾಜಣ್ಣ ದಿನಗೂಲಿ ನೌಕರ ರೇಷ್ಮೆ ಗೂಡಿನ ಮಾರುಕಟ್ಟೆ ರಾಮನಗರಂ	ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವ ಬಗ್ಗೆ